## ಹೃದಯಂಗಮ ಕಥನ, ಕೊನೆಮೊದಲಿಲ್ಲದ ನೆರಳು

‘ಬೆಳಕಿನ ನೆರಳು’ ಮಹಾತ್ಮ–ಹರಿಲಾಲ ಜೀವನ ಕಥನ (ದಿನಕರ ಜೋಶಿ, ಕನ್ನಡ ಅನುವಾದ ಡಿ.ಎನ್. ಶ್ರೀನಾಥ್) ಬಹಳ ಮನೋಜ್ಞವಾಗಿ ಮೂಡಿಬಂದಿದೆ. ಮಾನಸಿಕ ಸಂವೇದನೆಗಳನ್ನು ಒಳಗೊಂಡ ಕಾದಂಬರಿಯಿದು. ಧಾರಾವಾಹಿ ಮುಗಿಯುತ್ತಿದ್ದಂತೆ ಕಣ್ಣಿನಲ್ಲಿ ನೀರು ಹರಿಯಿತು. ಪ್ರತಿ ಗುರುವಾರವೂ ‘ಸುಧಾ’ ವಾರಪತ್ರಿಕೆಗಾಗಿ ಚಾತಕಪಕ್ಷಿಯಂತೆ ಕಾಯುತ್ತಿದ್ದೆ.

ಮಹಾತ್ಮ ಗಾಂಧೀಜಿಯವರ ಬಗ್ಗೆ ಮಾತ್ರ ತಿಳಿದಿದ್ದ ನಮಗೆ ಅವರ ಮಕ್ಕಳ ಜೀವನದ ಬಗ್ಗೆ ಪರಿಚಯವನ್ನು ಮಾಡಿಕೊಟ್ಟಿತು. ಶ್ರದ್ಧೆ, ಶುದ್ಧ ನಿಷ್ಠೆ, ಪ್ರಾಮಾಣಿಕತೆಗಿಂತ ದೊಡ್ಡ ಸಂಪತ್ತು ಜಗತ್ತಿನಲ್ಲಿ ಬೇರೆ ಯಾವುದೂ ಇಲ್ಲ ಎಂದು ನಂಬಿ ಬದುಕಿದವರು ಗಾಂಧೀಜಿ. ಆದರೆ ಅವರ ಮಕ್ಕಳು ಹೇಳ ಹೆಸರಿಲ್ಲದವರಂತೆ ಆದರು. ಅವರ ನೆರಳಿನಂತೆ ಇದ್ದ ಇತರರ ಮಕ್ಕಳು ಇಂದು ರಾಜಕೀಯ ರಂಗದಲ್ಲಿ ಮೆರೆಯುತ್ತಿದ್ದಾರೆ ಎಂಬ ಭಾವನೆಯಿಂದ ಬಹಳ ಸಂಕಟವಾಯಿತು.

—ಉಮಾದೇವಿ ಬೆಂಗಳೂರು

### ಸಂವಾದಕ್ಕೆ ಯೋಗ್ಯ

ಮಾರ್ಚ್ 12ರ ಸಂಚಿಕೆಯಲ್ಲಿ ಮುಕ್ತಾಯವಾದ ‘ಬೆಳಕಿನ ನೆರಳು’ ದೀರ್ಘ ಕಾದಂಬರಿ ಬಹಳ ಸೊಗಸಾಗಿದೆ. ಈ ಧಾರಾವಾಹಿಯನ್ನು ಕನ್ನಡಿಗರಿಗೆ ಓದಲು ಅವಕಾಶ ಮಾಡಿಕೊಟ್ಟ ಅನುವಾದಕ ಡಿ.ಎನ್. ಶ್ರೀನಾಥ್ ಹಾಗೂ ಪ್ರಕಟಿಸಿದ ‘ಸುಧಾ’ ಪತ್ರಿಕೆಗೆ ಧನ್ಯವಾದಗಳು.






ಈ ಕಾದಂಬರಿಯು ಪೋಷಕರು ತಮ್ಮ ಆದರ್ಶ ಹಾಗೂ ಸಿದ್ಧಾಂತಗಳನ್ನು ಬಲವಂತವಾಗಿ ಹೇರಿದಾಗ ಒಂದು ಜೀವ ಹೇಗೆ ಅವನತಿಯ ಹಾದಿಯಲ್ಲಿ ಸಾಗುತ್ತದೆ ಎನ್ನುವುದಕ್ಕೆ ಉದಾಹರಣೆಯಾಗಿದೆ. ‘ಬೆಳಕಿನ ನೆರಳು’ ಸಂವಾದಕ್ಕೆ ಯೋಗ್ಯವಾದ ಕಾದಂಬರಿಯೂ ಆಗಿದೆ.

—ಎಚ್.ಎಸ್. ಶ್ರೀಮತಿ, ಬೆಂಗಳೂರು

### ಆಪ್ತ ಉಡುಗೊರೆ

ಮಹಾತ್ಮ ಗಾಂಧಿಯವರ 150ನೇ ಜನ್ಮದಿನಾಚರಣೆಯ ಸಂಭ್ರಮಕ್ಕೆ ಅತ್ಯಂತ ಆಪ್ತವಾದ ಉಡುಗೊರೆ ಕೊಟ್ಟಂತಾಗಿದೆ. ಗಾಂಧೀಜಿಯವರ ಮಕ್ಕಳ ಬಗ್ಗೆ ಇಷ್ಟು ಸವಿಸ್ತಾರವಾದ ಮಾಹಿತಿ ಎಲ್ಲೂ ಓದಿರಲಿಲ್ಲ.

—ಮುಕುಂದ ಹೆರಕಲ್ಲ, ಬೆಂಗಳೂರು

### ‘ಸುಧಾ’ಕ್ಕಾಗಿ ಕಾಯುತ್ತಿದ್ದೆ…

23 ಕಂತುಗಳಲ್ಲಿ ಪ್ರಕಟವಾದ ‘ಮಹಾತ್ಮ ಮತ್ತು ಹರಿಲಾಲ’ರ ಕುರಿತ ‘ಬೆಳಕಿನ ನೆರಳು’ ಧಾರಾವಾಹಿ ಆತ್ಮವಿಮರ್ಶೆ ಮಾಡಿಕೊಳ್ಳುವ ಹಾಗಿತ್ತು. ಎಲ್ಲಿಯ ತಂದೆ ಎಲ್ಲಿಯ ಮಗ…? ಮಗ ಪ್ರತಿ ಸಲ ತಪ್ಪು ಮಾಡಿದಾಗ ಅದಕ್ಕೆ ನಾನೇ ಪರೋಕ್ಷ ಕಾರಣ ಎಂದು ಉಪವಾಸದಿಂದ ತಮ್ಮನ್ನು ತಾವು ಶಿಕ್ಷಿಸಿಕೊಳ್ಳುವ ಬಾಪೂಜಿ ಒಬ್ಬ ಮಹಾತ್ಮರೇ. ಇದು ಎಲ್ಲ ತಂದೆಯವರಲ್ಲಿ ಬರಲು ಸಾಧ್ಯವೇ ಇಲ್ಲ. ಹರಿಲಾಲ ತಾಯಿಯಾಗಿ ‘ಬಾ’ ಪಟ್ಟ ನೋವು , ಸಂಕಟ ವರ್ಣಿಸಲು ಸಾಧ್ಯವೇ ಇಲ್ಲ. ಪ್ರತಿ ಕಂತೂ ಕುತೂಹಲಕರವಾಗಿತ್ತು. ಹಾಗೆ ಪ್ರತಿ ಗುರುವಾರ ‘ಸುಧಾ’ಕ್ಕಾಗಿ ಕಾಯುವಂತೆ ಮಾಡಿತ್ತು.

—ಪ್ರಮೀಳಾ ಷಣ್ಮುಖ, ಮೈಸೂರು

### ಸಾತ್ವಿಕ ಹಟಮಾರಿತನ

‘ಬೆಳಕಿನ ನೆರಳು’ ಧಾರಾವಾಹಿ ಕೊನೆಯವರೆಗೂ ಕುತೂಹಲವನ್ನು ಕಾಯ್ದುಕೊಂಡು ಬಂತು. ಬಾಪು ಮತ್ತವರ ಕುಟುಂಬದಲ್ಲಿನ ಬೆಳವಣಿಗೆಗಳು, ದೇಶದ ಸ್ವಾತಂತ್ರ್ಯ ಹೋರಾಟದೊಂದಿಗೆ ಬೆಸೆದುಕೊಂಡದ್ದನ್ನು ವಿವರಿಸಿತು. ಬಾಲ್ಯದಿಂದ ತಾರುಣ್ಯದ ದಿನಗಳವರೆಗೆ ಬಾಪುವಿಗೆ ವಿಧೇಯನಾಗಿಯೇ ಇದ್ದ ಹರಿಲಾಲ, ನಂತರದ ದಿನಗಳಲ್ಲಿ ಹಾದಿಬಿಡಲು, ಆದರ್ಶಕ್ಕೆ ಅಂಟಿಕೊಂಡಿದ್ದ ಬಾಪುವಿನ ನಿರ್ಧಾರಗಳು ಬಹುಮಟ್ಟಿಗೆ ಕಾರಣವಾದವು.

ಎಲ್ಲವೂ ತನ್ನ ಮೂಗಿನ ನೇರಕ್ಕೇ ನಡೆಯಬೇಕು ಎಂಬ ಬಾಪುವಿನ ಸಾತ್ವಿಕ ಹಟಮಾರಿತನದಿಂದಾಗಿ ಹರಿಲಾಲ, ಬಾ ಮತ್ತೂ ಅನೇಕರಿಗೆ ಕಿರಿಕಿರಿಯಾಯಿತೆನ್ನಬಹುದು.

—ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

### ತದ್ವಿರುದ್ಧ ವ್ಯಕ್ತಿತ್ವ

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಬಗ್ಗೆ ಅನೇಕ ಕಥೆಗಳನ್ನು ಓದಿದ್ದೇನೆ. ಆದರೆ ಮಹಾತ್ಮ ಮತ್ತು ಹರಿಲಾಲ ಕುರಿತ ಈ ಧಾರಾವಾಹಿ ಇವರಿಬ್ಬರ ಕಥೆಯನ್ನು ಸವಿಸ್ತಾರವಾಗಿ ತಿಳಿಸಿತು. ಗಾಂಧೀಜಿಯವರದ್ದು ಉನ್ನತ ಮಟ್ಟದ ಆದರ್ಶ ಜೀವನ ಹಾಗೂ ವ್ಯಕ್ತಿತ್ವವಾದರೆ ಅವರ ಮಗ ಹರಿಲಾಲನದು ತದ್ವಿರುದ್ಧ ವ್ಯಕ್ತಿತ್ವ. ಬಾ ಅವರ ಸಹನಾ ಗುಣ ಮೆಚ್ಚುಗೆಯಾಯಿತು. ದೇಶದ ಶ್ರೇಷ್ಠ ವ್ಯಕ್ತಿಯ ಮಗ ತೊಡಲು ಒಂದು ಶುದ್ಧವಾದ ಬಟ್ಟೆಯೂ ಇಲ್ಲದೆ ಒದ್ದಾಡಿದ್ದು, ಮದ್ಯದ ದಾಸನಾಗಿ ಕೆಳಮಟ್ಟದ ಜೀವನ ನಡೆಸಿದ್ದು ವಿಪರ್ಯಾಸವಲ್ಲವೇ?

—ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ

